ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈಗಾಗಲೇ ಉತ್ತರ ಹೇಳಲಾಗಿದೆ.

ಶ್ರೀ ವೇದಾಂತ ಹೆಬ್ಬಿಗೆ.—ಕ್ಷೇತ್ರೀಯ ಸಿಬ್ಬಂದಿಗಾಗಿ ವಾಕಿ-ಟಾಕಿ ಯಂತ್ರಗಳನ್ನು ಶೀಘ್ರ ಮಾಹಿತಿ ಪಡೆಯಲು ಖರೀದಿಸುವ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಇನ್ನೂ ಖರೀದಿ ಮಾಡಿಲ್ಲ. ಯಾವಾಗ ಖರೀದಿ ಮಾಡುತ್ತೀರಿ ? ಆನೆಗಳು ಸತ್ತ ಮೇಲೆ ಖರೀದಿ ಮಾಡುತ್ತೀರಾ ?

ಶ್ರೀ ಜೆ. ಎಸ್. ದೇಶ್‌ಮುಖ್.—ಈಗಾಗಲೇ ೩೦ ಖರೀದಿ ಮಾಡಿದ್ದೇವೆ. ಇನ್ನೂ ೫೦ ಖರೀದಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಬೆಳೆಸಲು ವೆಚ್ಚವಾದ ಮೊಬಲಗು

೭೧ (೩೭೩)(ಡಿ) ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ೧೯೪೪-೪೫ ಹಾಗೂ ೧೯೪೫-೪೬ನೇ ಸಾಲಿನಲ್ಲಿ ಅರಣ್ಯ ಬೆಳೆಸಲು (ಹೊಸದಾಗಿ) ಖರ್ಚು ಮಾಡಿದ ಮೊಬಲಗು ಎಷ್ಟು ?

ಆ) ಎಷ್ಟು ಎಕರೆ ವಿಸ್ತೀರ್ಣಗಳಲ್ಲಿ ಅರಣ್ಯ ಬೆಳೆಸಲಾಗಿದೆ ?

ಶ್ರೀ. ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ೧೯೪೫ ಮತ್ತು ೧೯೪೬ನೇ ಪರ್ಷಗಳಲ್ಲಿ ಒಟ್ಟು ರೂ. ೨.೩೮ ಕೋಟಿಗಳನ್ನು ಅರಣ್ಯ ಬೆಳೆಸಲು ಖರ್ಚು ಮಾಡಲಾಗಿದೆ, ವಿವರಗಳು ಈ ಕೆಳಗಿನಂತಿವೆ.

ವಿಭಾಗ	೧೯೪೪-೪೫	೧೯೪೫-೪೬
ಶಿವಮೊಗ್ಗ	೩೭,೦೯,೦೦೦	೪೧,೦೯,೫೦೦
ಸಾಗರ	೫೪,೨೬,೦೦೦	೬೪,೬೯,೪೦೦
ಭದ್ರಾವತಿ	೨೩,೬೫,೭೦೦	೧೭,೧೦,೦೦೦
ಒಟ್ಟು	೧,೧೫,೦೦,೭೦೦	೧,೨೨,೯೪,೯೦೦

ಆ) ಅರಣ್ಯ ಇಲಾಖೆಯ ಮುಖಾಂತರ ೪೧೯೭ ಹೆಕ್ಟೇರ್‌ಗಳಲ್ಲಿ ಅರಣ್ಯ ಬೆಳೆಸಲಾಗಿದೆ. ವಿವರಗಳು ಈ ಕೆಳಗಿನಂತಿವೆ;

ಶಿವಮೊಗ್ಗ	೭೭೩.೨೭ ಹೆಕ್ಟೇರ್‌ಗಳು	೪೪೬.೯೬ ಹೆಕ್ಟೇರ್‌ಗಳು
ಸಾಗರ	೬೩೮.೪೬ ,,	೭೩೨ ೩೮ ,,
ಭದ್ರಾವತಿ	೪೨೧.೯೫ ,,	೫೯೨.೭೧ ,,
ಒಟ್ಟು	೨೦೨೫.೦೪ ಹೆಕ್ಟೇರ್‌ಗಳು	೨೧೭೨.೦೫ ಹೆಕ್ಟೇರ್‌ಗಳು

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಅಂಕಿ ಅಂಶದಿಂದ ತೃಪ್ತಿಪಟ್ಟುಕೊಂಡರೆ ಸಾಲದು. ಈ ಅರಣ್ಯ ಬೆಳೆಸುವುದಕ್ಕೆ ಏನು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ ಅದೇ ರೀತಿ ಈ ಗಿಡಗಳನ್ನು ಸಂರಕ್ಷಣೆ ಮಾಡುವುದಕ್ಕೆ ಕಾಳಜಿ ವಹಿಸಬೇಕು. ಆದುದರಿಂದ ಈ ಗಿಡಮರಗಳನ್ನು ಸಂರಕ್ಷಣೆ ಮಾಡುವುದಕ್ಕೆ ತಾವೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ನಾನು ಈ ವಿಷಯವನ್ನು ಏತಕ್ಕೆ ಕೇಳುತ್ತಿದ್ದೇನೆ ಎಂದರೆ ಒಂದು ಕಡೆಯಿಂದ ಗಿಡಗಳನ್ನು ಹಾಕಿಕೊಂಡು ಬಂದರೆ ಮತ್ತೊಂದು ಕಡೆಯಿಂದ ಕೆಲವು ಗಿಡಗಳು ಹೋಗಿರುತ್ತವೆ. ಆದುದರಿಂದ ಇದರ ಸಂರಕ್ಷಣೆ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಜೆ. ಎಸ್. ದೇಶಮುಖ್.—ಎಲ್ಲೆಲ್ಲಿ ಹಾಗಾಗುತ್ತದೆ ಅಂಥ ಕಡೆ ಗಮನಕೊಟ್ಟು ಅಲ್ಲಿ ಮತ್ತೆ ಆ ಗಿಡಗಳನ್ನು ನೆಡುತ್ತಾರೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಾನು ನಿಮ್ಮನ್ನು ಪ್ರಶ್ನೆ ಕೇಳಲು ಅಲೋ ಮಾಡುವುದಿಲ್ಲ. ನಿಮ್ಮ ಪ್ರಶ್ನೆ ಬಂದಾಗ ಕೇಳಿ. ಈಗ ಸಾಧ್ಯವಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ನನ್ನದೊಂದು ಸಣ್ಣ ಪ್ರಶ್ನೆ, ಏನೆಂದರೆ ಇವರು ಏನು ಗಿಡಗಳನ್ನು ಪ್ಲಾಂಟೇಷನ್ ಮಾಡುತ್ತಿದ್ದಾರೆ ಆ ಜಾಗದಲ್ಲೆ ಗಿಡ ಇದ್ದರೂ ಕೂಡ ಮತ್ತೆ ರೀಪ್ಲಾಂಟೇಷನ್ ಮಾಡುತ್ತೇವೆಂದು ಸುಮ್ಮನೆ ಹೇಳಿ ಗಿಡಗಳನ್ನು ಹಾಕಿದ್ದೇವೆಂದು ಹೇಳಿ ಹಣ ಖರ್ಚು ಮಾಡುತ್ತಿದ್ದಾರೆ. ಇಂತಹ ಹಣ ಇಲಾಖಾ ಪತಿಯಿಂದ ಎಷ್ಟು ಖರ್ಚಾಗಿದೆ ಎನ್ನುವುದನ್ನು ತಾವು ಹೇಳುತ್ತೀರಾ ?

ಶ್ರೀ ಜೆ. ಎಸ್. ದೇಶಮುಖ್.—ಅಂಥ ವಿಚಾರ ಇದುವರೆಗೂ ಸರ್ಕಾರದ ಗಮನಕ್ಕೆ ಬಂದಿಲ್ಲ. ತಮಗೆ ಇದರ ಬಗ್ಗೆ ಮಾಹಿತಿ ಇದ್ದರೆ, ಉದಾಹರಣೆ ಕೊಟ್ಟರೆ, ಹೇಳುತ್ತೇನೆ.

ಬೈಂದೂರು ಕ್ಷೇತ್ರದಲ್ಲಿರುವ ನಾವುಂದದಲ್ಲಿ ವಿದ್ಯುಚ್ಛಕ್ತಿ ಉಪಕೇಂದ್ರ ಸ್ಥಾಪನೆ

೭೫೫(ಎ) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರದಿಂದ ಮುರಡೇಶ್ವರದವರೆಗೆ ಈಗ ವಿದ್ಯುಚ್ಛಕ್ತಿ ಉಪ ಕೇಂದ್ರವಿಲ್ಲದೆ ಮಧ್ಯ ಭಾಗದಲ್ಲಿರುವ ಗ್ರಾಹಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬೈಂದೂರು ಕ್ಷೇತ್ರದ ನಾವುಂದ ಎಂಬಲ್ಲಿ ಉಪ ಕೇಂದ್ರದ ಸ್ಥಾಪನೆ ಮಾಡುವ ಬಗ್ಗೆ ಪ್ರಸ್ತಾಪವಿರುವುದು ನಿಜವೇ?

ಇ) ಹಾಗಿದ್ದಲ್ಲಿ ಇದಕ್ಕೆ ಯಾವಾಗ ಮಂಜೂರಾತಿ ನೀಡಿ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್(ವಿದ್ಯುತ್ ಹಾಗೂ ಕೈಗಾರಿಕಾ ಮಂತ್ರಿಗಳು):—

ಅ) ಗಮನಕ್ಕೆ ಬಂದಿದೆ.

ಆ) ಹೌದು.

ಇ) ತಾಂತ್ರಿಕ ಅನುಮೋದನೆಯಾದ ಮೇಲೆ ಸುಮಾರು ಎರಡು ವರ್ಷಗಳು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಹಾಗೆಯೇ (ಇ) ಪ್ರಶ್ನೆಗೆ ಉತ್ತರವಾಗಿ ತಾಂತ್ರಿಕ ಅನುಮೋದನೆಯಾದ ಮೇಲೆ ಸುಮಾರು ಎರಡು ವರ್ಷಗಳು ಎಂದು ಹೇಳಿದ್ದೀರಿ. ಕಾರಣ ಏನು ? ಎಷ್ಟು ವರ್ಷದಲ್ಲಿ ಈ ವಿದ್ಯುಚ್ಛಕ್ತಿ ಉಪಕೇಂದ್ರವನ್ನು ಮುಗಿಸುತ್ತೀರಿ ? ಈ ವಿಚಾರದಲ್ಲಿ ನಾನು ಖಿಖಿಳಿನೇ ನಿಯಮದ ಮೇರೆಗೆ ಒಂದು ಪ್ರಶ್ನೆ ಎತ್ತಿದ್ದೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಕುಂದಾಪುರ ತಾಲ್ಲೂಕಿನಲ್ಲಿರುವ ಈ ಬೈಂದೂರು ಕ್ಷೇತ್ರದಲ್ಲಿ ಕರೆಂಟ್ ಸರಿಯಾಗಿ ಇಲ್ಲದೆ ಬಹಳ ಡಿಮ್ ಆಗಿ ಇರುತ್ತದೆ. ವಿದ್ಯುಚ್ಛಕ್ತಿಯನ್ನು ಅಲ್ಲಿ ಸಮರ್ಪಕವಾಗಿ ದೊರಕಿಸುವ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ಅಲ್ಲದೆ ಅಲ್ಲಿ ರೈತರು ಹಾಕಿರತಕ್ಕಂಥ ಪಂಪ್‌ಸೆಟ್‌ಗಳಿಗೂ ಸಹ ವಿದ್ಯುತ್ ಸರಿಯಾಗಿ ಇಲ್ಲದೆ ಬಹಳ ತೊಂದರೆಯಾಗಿದೆ ಮತ್ತು ಶಿರೂರ್ ಎಂಬ ಗ್ರಾಮದಲ್ಲಿ ಕಳೆದ ೨-೩ ತಿಂಗಳಿಂದಲೂ ಕೂಡ ಕರೆಂಟ್ ಇರುವುದಿಲ್ಲ. ಅದಕ್ಕೋಸ್ಕರವಾಗಿ ನಾನು ಹೇಳುವುದು ಅಲ್ಲಿ ಈ ಬಗ್ಗೆ ಒಂದು ಉಪ ಕೇಂದ್ರ ಸ್ಥಾಪನೆ ಆಗುವುದು ಆಗತ್ಯ ಇದೆ. ಇದರ ಬಗ್ಗೆ ತಾವು ಆಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಂಡು ಆ ಕ್ಷೇತ್ರದ ಜನರಿಗೆ ತೊಂದರೆಯಾಗದೇ ಇರುವ ಹಾಗೆ ಸರ್ಕಾರದವರು ಮಾಡುತ್ತಾರೆಯೇ ? ಇನ್ನು ಎಷ್ಟು ವರ್ಷದಲ್ಲಿ ಈ ಕೆಲಸವನ್ನು ಮುಗಿಸುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಅಲ್ಲಿ ಒಂದು ಸಬ್‌ಸ್ಟೇಷನ್ ಮಾಡುವುದೂ ಆಗತ್ಯ ಇದೆ ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಆ ಕ್ಷೇತ್ರದಲ್ಲಿ ಆಗುತ್ತಾ ಇರತಕ್ಕಂಥ ತೊಂದರೆಗಳನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಗಮನಿಸಿ ಅದರ ಬಗ್ಗೆ ತತ್‌ಕ್ಷಣವಾಗಿ ಎರಡು